ಗದ್ಗದಿತರಾಗಿ ಕ್ಷಮೆ ಯಾಚಿಸಿದ್ದು ದಾವಣಗೆರೆಯ ಅವರು ಪ್ರಿನ್ಸಿಪಾಲರಾಗಿದ್ದ ಕಾಲೇಜಿನಲ್ಲಿ.

ಪರೀಕ್ಷೆಯ ಹಿಂದಿನ ತರಾಸು ಕಾದಂಬರಿ ನಕ್ಕು ನನ್ನನ್ನು ವಶಪಡಿಸಿಕೊಳ್ಳದೇ ಹೋಗಿದ್ದಲ್ಲಿ ಹೆಚ್ಚಿನ ಅಂಕ ಗಳಿಸಿ ಹತ್ತನೆ ತರಗತಿ ತೇರ್ಗಡೆಯಾಗುತ್ತಿದ್ದೇನೊ! ಪಿಯುಸಿ ಸೇರುವುದೊತ್ತಟ್ಟಿಗಿರಲಿ, ತೋಳಿನಲ್ಲಿ ಸ್ವಲ್ಪವಾದರು ಮಾಂಸವಿರದ ಕಾರಣಕ್ಕೆ ಕುಂಬಾರಿಕೆ ಕಸುಬು ಕಲಿಯುವುದಾಗಲಿಲ್ಲ. ಎಲ್ಲಾದರು ಹೋಗಿ ಬದುಕಿಕೊ ಎಂದು ಅಪ್ಪ ಹೇಳಿದ; ಅದರಲ್ಲಿ ನೋವು, ಅಸಹಾಯಕತೆ ಇತ್ತು. ಯಾರದೋ ನೆರವಿನಿಂದ ಹೊಸಪೇಟೆಗೆ ಹೋಗಿ ರೇಲ್ವೆ ಇಲಾಖೆಯಲ್ಲಿ ದಿನಗೂಲಿಯಾಗಿ ಸೇರಿದೆ. ಅಲ್ಲಿನ ನಿಲ್ದಾಣದ ಅನುಭವಗಳನ್ನು ಕಥೆಯಾಗಿಸಿ ಪತ್ರಿಕೆಗಳಿಗೆ ಕಳಿಸುತ್ತಿದ್ದೆ. ಆದರೆ ಅವು ಮಾರ್ಗಮಧ್ಯದಲ್ಲಿಯೇ ಅಂತರ್ಧಾನವಾಗುತ್ತಿದ್ದವು. ರೇಲ್ವೆ ಇಲಾಖೆಯಲ್ಲಿ ಹಲವು ಭಾಷೆಗಳನ್ನು ಕಲಿಯಬಹುದಿತ್ತು, ಆದರೆ ಅಲ್ಪಸ್ವಲ್ಪ ತೆಲುಗು ಕಲಿತು 'ಅಗ್ಗಿಪುಲ್ಲ' ಹೆಸರಿನ ಕಥೆಯನ್ನು ಕನ್ನಡಕ್ಕೆ ಅನುವಾದಿಸಿದೆ. ಬಳ್ಳಾರಿ ರೇಲ್ವೆ ನಿಲ್ದಾಣದಲ್ಲಿ ಸುಮಾರು ಮುವ್ವತ್ತಾರು ಗಂಟೆಗಳ ಕಾಲ ಉಪವಾಸವಿದ್ದುದೂ ಒಂದು ಸೃಜನಶೀಲ ಅನುಭವವೆ.

★★★

ಎಲ್ಲಾ ಕಥೆಗಾರರು ಸ್ವಭಾವತಃ ಕವಿಗಳೆ. ಎರಡು ವರ್ಷಗಳ ಕಾಲ ಓತೋಪ್ರೋತವಾಗಿ ಕವಿತೆಗಳನ್ನು ಬರೆಯಲು ಸಾಧ್ಯವಾದದ್ದು ನಾನು ಸಿದ್ಧಗಂಗಾ ಮಠದಲ್ಲಿದ್ದಾಗ. ಮಲ್ಲೇಪುರಂ ಜಿ. ವೆಂಕಟೇಶ್ ಹಳಗನ್ನಡ ಕಾವ್ಯಗಳ ಸಂಸ್ಕೃತದ ಕೆಲವು ಕೃತಿಗಳ ಓದುವ ಬಗೆಯನ್ನು ಕಲಿಸದಿದ್ದಲ್ಲಿ 'ಶಾಮಣ್ಣ' ಕಾದಂಬರಿಯನ್ನು ಬರೆಯುತ್ತಿರಲಿಲ್ಲ. ಲಂಕೇಶರು ಸಂಪಾದಿಸಿದ 'ಅಕ್ಷರ ಹೊಸಕಾವ್ಯ' ಓದಿನ ಪ್ರಭಾವದಿಂದ ಕೇವಲ ಒಂದು ತಿಂಗಳ ಅವಧಿಯಲ್ಲಿ ನೂರಕ್ಕೂ ಹೆಚ್ಚು ಕವಿತೆಗಳನ್ನು ಬರೆದು ತುಮಕೂರಿನಲ್ಲಿದ್ದ ವೀಚಿ, ಸಣ್ಣಗುಡ್ಡಯ್ಯನವರಿಗೆ ತೋರಿಸಿ ಮಂಗಳಾರತಿ ಮಾಡಿಸಿಕೊಂಡೆ. ಮುಂದೊಂದಿನ ಅಗ್ರಹಾರ ಕೃಷ್ಣಮೂರ್ತಿ ನನಗೆ 'ಕಜ್ಜಿಕವಿ' ಎಂಬ ಬಿರುದು ನೀಡಿ ಸತ್ಕರಿಸಿದ್ದು ಧಾರವಾಡದ ಆಕಾಶವಾಣಿ ಕೇಂದ್ರದಲ್ಲಿ.

ಶ್ರೀ ಶಿವಕುಮಾರಸ್ವಾಮೀಜಿ ನೀಡಿದ ಶಿಫಾರಸು ಪತ್ರ ಲಗತ್ತಿಸಿ ಕವಿತೆಯೊಂದನ್ನು 'ಪ್ರಜಾವಾಣಿ'ಗೆ ಕಳಿಸಿದೆ, ಅದರ ಪ್ರಕಟಣಾ ನಿರೀಕ್ಷೆಯಲ್ಲಿ ಕ್ಯಾತಸಂದ್ರದ ಶ್ರೀವೆಂಕಟೇಶ್ವರ ಹೇರ್ ಕಟ್ಟಿಂಗ್ ಸಲೂನಿಗೆ ಪ್ರತಿ ಸಂಡೆ ಹೋಗಿ 'ಪ್ರಜಾವಾಣಿ'ಯ ಸಾಪ್ತಾಹಿಕ ಪುರವಣಿಯನ್ನು ಪಾರಾಯಣ ಮಾಡಲಾರಂಭಿಸಿದೆ. ಆಗ ನನ್ನನ್ನು ಪರವಶಗೊಳಿಸಿದ್ದು ಪ್ರಕಟವಾಗಿದ್ದ 'ನವಿಲುಗಳು' ಹೆಸರಿನ ಕತೆ. ಅದರ ಕತೆಗಾರ ಯು.ಆರ್. ಅನಂತಮೂರ್ತಿಯವರನ್ನು ನನ್ನ ಹಾಗೆ ಉದಯೋನ್ಮುಖ ಲೇಖಕರೆಂದೇ ಅಪಾರ್ಥ ಮಾಡಿಕೊಂಡೆ. ಪ್ರತಿ ಓದಿಗೂ ಆ ಕಥೆ ಹೊಸಹೊಸ ಅನುಭವ ಕರುಣಿಸಿತು, ವಿಚಿತ್ರ ತಳಮಳ ಸೃಷ್ಟಿಸಿತು. 'ನವಿಲುಗಳು' ಓದು ಜಿ.ಟಿ. ರಾಘವ, ಪಿ. ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ರಾಮಚಂದ್ರ ಶರ್ಮ ಮುಂತಾದವರ ಕಥೆಗಳವರೆಗೆ ವಿಸ್ತರಿಸಿತು.

1974ರಲ್ಲಿ ಪಂಡಿತಾರಾಧ್ಯರ ಸಂಪಾದಕತ್ವದ ಬಹಿರಂಗ ವಾರಪತ್ರಿಕೆ ಮೂಲಕ ಪರಿಚಯವಾದ ಕುಖ್ಯಾತ ವ್ಯಕ್ತಿ ಡಾ. ರೇವಣಸಿದ್ದಪ್ಪ ಅದೆ ಹೆಸರಿನ ಕಥೆ ಬರೆಸಿಕೊಂಡನೇನೊ ನಿಜ. 1977ರಲ್ಲಿ ಸಿಂಧನೂರು ಸಮೀಪದ ಕ್ಯಾಂಪಿನಲ್ಲಿ ಪೊಲೀಸರ ಎನ್‌ಕೌಂಟರ್‌ಗೆ ಬಲಿಯಾದ ಆ ದರೋಡೆಕೋರ ರೇವಣಸಿದ್ದಪ್ಪ ಈಗಲೂ ನೆನಪಾಗಿ ಕಣ್ಣಲ್ಲಿ ನೀರು ತರುತ್ತಿದ್ದಾನೆ. ಕಳೆದ ನಾಲ್ಕೂವರೆ ದಶಕಗಳ ಅವಧಿಯಲ್ಲಿ ನಾನು ಮುನ್ನೂರಕ್ಕೂ ಅಧಿಕ